ಹಾಗೂ ಉತ್ತಮ ಬೀಜಗಳನ್ನು ಖರೀದಿಸಿ ಗುಲ್ಬರ್ಗ ಜಿಲ್ಲೆಯ ರೈತರಿಗೆ ಪೂರೈಸಬೇಕೆಂದು ವಿನಂತಿಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಈಗಾಗಲೇ ಹತ್ತಿ ಬೀಜದ ಕೊರತೆ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ. ಗುಲ್ಬರ್ಗಾ ಜಿಲ್ಲೆಗೆ ಎಷ್ಟು ಪೂರವಟಿ ಸಾಧ್ಯ ಅಷ್ಟು ಮಾಡುತ್ತೇನೆ. ಇಷ್ಟೇ ಅಲ್ಲದೆ ಗುಜರಾತ್, ಮಹಾರಾಷ್ಟ್ರ ಮತ್ತಿತರ ರಾಜ್ಯಗಳಿಂದ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

೧೩ ದಕ್ಷಿಣಕನ್ನಡ ಜಿಲ್ಲೆಯ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಮತ್ತು ಜನತಾ ಬಜಾರ್‌ಗಳಲ್ಲಿ ಅಲ್ಪ ಸಂಖ್ಯಾತರು ಮತ್ತು ಪರಿಶಿಷ್ಟ ಜನಾಂಗದವರಿಗೆ ಪ್ರಾಶಿನಿಧ್ಯ ಕೊಡುವುದು.

ಶ್ರೀ ಬಿ. ಎಂ. ಇದಿನಬ್ಬ(ಉಳ್ಳಾಲ).—ಮಾನ್ಯ ಅಧ್ಯಕ್ಷರೆ, ದಕ್ಷಿಣಕನ್ನಡ ಸೆಂಟ್ರಲ್ ಸಹಕಾರಿ ಬ್ಯಾಂಕ್ ನಲ್ಲಿಅದೇ ರೀತಿ ಮಂಗಳೂರು ಜನತಾ ಬಜಾರಿನಲ್ಲಿ ಸಿಬ್ಬಂದಿಗಳಲ್ಲಿ ಅಲ್ಪಸಂಖ್ಯಾತರು ಎಷ್ಟು ಜನರಿದ್ದಾರೆ ಅದೇ ರೀತಿ ಪರಿಶಿಷ್ಟ ವರ್ಗ ಮತ್ತು ಜನಾಂಗದ ಸಿಬ್ಬಂದಿಗಳು ಇದ್ದಾರೆಯೇ ? ಒಂದು ವೇಳೆ ಇಲ್ಲವಾದಲ್ಲಿ ಅವರ ದಾಮಾಶಯಂಕ್ಕನುಸರಿಸಿ ಸಿಬ್ಬಂದಿಗಳನ್ನು ತೆಗೆದುಕೊಳ್ಳುವಂತೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲಾಗುವುದೇ ? ಈ ಕುರಿತು ಮುಷ್ಕರ ವರ್ಗೆರೆ ನಡೆದಿದೆಯೇ ? ಈ ಬಗ್ಗೆ ಸಹಕಾರಿ ಸಚಿವರ ಗಮನವನ್ನು ಸೆಳೆಯುಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರಿಗೆ ನಂತರ ಉತ್ತರವನ್ನು ತರಿಸಿಕೊಡ ಲಾಗುವುದು.

೧೪ ಸಿರಸಿ ತಾಲ್ಲೂಕು ಭದ್ರಾಪುರದಲ್ಲಿ 16 ಮನೆಗಳು ಭಸ್ಮವಾಗಿದ್ದು ದರಿಂದ ಸಂಬಂಧ ಪಟ್ಟವರಿಗೆ ಪರಿಹಾರ ನೀಡುವುದು

ಶ್ರಿ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯ ಸಿರಸಿ ತಾಲ್ಲೂಕು ಭದ್ರಾಪುರದಲ್ಲಿ ೧೫ ರಿಂದ ೧೬ ಮನೆಗಳು ಭಸ್ಮವಾಗಿ ಸುಮಾರು ೧೫–೧೬ ಕುಟುಂಬಗಳು ನಿರಾಶ್ರಿತರಾಗಿದ್ದಾರೆ. ಅವರಿಗೆ ಸರಕಾರದಿಂದ ಮನೆ ಹಾಗೂ ಪರಿಹಾರ ಒದಗಿಸಬೇಕು. ಹಾಗೂ ಇದರಲ್ಲಿ ಎಲ್ಲಾ ಕುಟುಂಬ ವರ್ಗದವರಿದ್ದಾರೆ, ಆದುದರಿಂದ ಇದನ್ನು ಸರಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ದಿನಾಂಕ ೨೩–೨–೧೯೮೮ರಂದು ಮಧ್ಯಾಹ್ನ ಸಿರಸಿ ತಾಲ್ಲೂಕು ಭದ್ರಾಪುರ ಗ್ರಾಮದಲ್ಲಿ ಆಕಸ್ಮಿಕ ಬೆಂಕಿಯಿಂದ ೧೬ ಗುಡಿಸಲುಗಳು ಸುಟ್ಟು ಅವರಲ್ಲಿ ತೆಂಗಿನ ಬೀಜ ಭತ್ತದ ಚೀಲ ಮನೆಯ ಸಾಮಾನು ಮತ್ತು ಆ ಮನೆಯ ದನದ ಕೊಟ್ಟಿಗೆಯಲ್ಲಿ ದ್ದಂತಹ ಒಂದು ಹಸು ಮತ್ತು ಕರು ಸುಟ್ಟು ಭಸ್ಮವಾಗಿವೆ. ದಿನಾಂಕ ೨೪–೨–೧೯೮೮ರಂದು ಸ್ಥಳೀಯ ಪೊಲೀಸ್ ಮತ್ತು ರೆವಿನ್ಯೂ ಅಧಿಕಾರಿಗಳು ಸ್ಥಳಕ್ಕೆ ತಲುಪಿ ಪರಿಹಾರ ಕಾರ್ಯಕ್ರಮ ವನ್ನು ಕೈಗೊಂಡಿರುತ್ತಾರೆ, ಈ ಪ್ರಕರಣದಲ್ಲಿ ೨ ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದ್ದು ರೆವಿನ್ಯೂ ಇಲಾಖೆ ಎರವರು ಇಲ್ಲಿಯವರೆಗೆ ೧೨ ೫೦೦ ರೂಪಾಯಿಗಳ ಪರಿಹಾರವನ್ನು ಒದಗಿಸಿದ್ದಾರೆ. ಮತ್ತೆ ಉಷ್ಟೂ ಮನೆಗಳನ್ನು ಕಟ್ಟಿಸಿಕೊಡಲು ಸುಮಾರು ೮,೫೫೦ ರೂಪಾಯಿಗಳ ಬೆಲೆ ಬಾಳುವ ಕಟ್ಟಡದ ಸಾಮಗ್ರಿಗಳನ್ನು ಒದಗಿಸಿಕೊಡುತ್ತಾರೆ.

೧೫ ರಾಜ್ಯದ ಶಾಲಾ ಕಾಲೇಜುಗಳ ಪ್ರಾರಂಭವನ್ನು ಜೂನ್ ತಿಂಗಳಲ್ಲಿ ಮಾಡುವಂತೆ ಜಾರಿಗೊಳಿಸುವ ಆಜ್ಞೆಯನ್ನು ಪ್ರಚಾರ ಪಡಿಸುವುದು.

ಜಿ. ಎಸ್. [illegible].—ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ಲಕ್ಷಾಂತರ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕೇಳುವ ಪ್ರಶ್ನೆ ಶಾಲೆಗಳ ಪ್ರಾರಂಭ ಎಂದಿಗೆ ? ಕಳೆದ ವರ್ಷ ನಿಯೋಜಿಸಿದಂತೆ ಮೇ ತಿಂಗಳ ಮಧ್ಯಭಾಗದಲ್ಲಿ ಶಾಲೆಗಳಲ್ಲಿ ತರಗತಿಗಳು ಪ್ರಾರಂಭ ಆಗಬೇಕು. ಉರಿಬಿಸಲು, ವಿಪರೀತ

ಸೆಕೆ, ಕುಡಿಯುವ ನೀರಿನ ಅಭಾವ ಇದರಿಂದಾಗಿ ಶಾಲಾ ವರ್ಷವನ್ನು ಜೂನ್ ತಿಂಗಳ ಆರಂಭಕ್ಕೆ ಮುಂದೂಡಬೇಕು ಎಂಬ ಮನವಿ ಎಲ್ಲೆಡೆಗಳಿಂದ ಆಗಿದೆ. ಪ್ರಾಥಮಿಕ ಶಿಕ್ಷಣ ಸಚಿವರು ಈ ಕುರಿತು ಆಶ್ವಾಸನೆ ನೀಡಿದ್ದರೂ, ನಿಶ್ಚಿತವಾದ ಆಜ್ಞೆ ಹೊರಟಿಲ್ಲವೆಂದು ತಿಳಿದು ಬಂದಿದೆ ತಕ್ಷಣ ಮುಂದೂಡುವಿಕೆಯ ಆಜ್ಞೆ ಹೊರಡಿಸಿ ಮಕ್ಕಳ ಮನಸ್ಸಿನಲ್ಲಿರುವ ಗೊಂದಲ ಆದಷ್ಟಿಗಾಗುವ ತೊಂದರೆ ನಿವಾರಿಸಿ ಎಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ಸೋಮಶೇಖರ್.—ಈಗಾಗಲೇ ಆ ಬಗ್ಗೆ ಸರ್ಕಾರ ಆದೇಶವನ್ನು ಹೊರಡಿಸಿದೆ. ಹಿಂದೆ ಇದ್ದಂತಹ ಪದ್ಧತಿಯನ್ನು ಬದಲಾವಣೆ ಮಾಡಿ ಜೂನ್ ಒಂದರಿಂದ ಶಾಲೆಗಳು ಪ್ರಾರಂಭವಾಗುತ್ತವೆ. ಎಂಬುದಾಗಿ ಈಗಾಗಲೇ ತಿಳಿಸಲಾಗಿದೆ.

೧೬ ಚಿಂಚೋಳಿ ತಾಲ್ಲೂಕಿನ ಕಾಲೇಜುಗಳಲ್ಲಿ ವಾಣಿಜ್ಯ ಮತ್ತು ವಿಜ್ಞಾನ ವಿಷಯಗಳ ಬೋಧನೆಗೆ ಪರವಾನಗಿ ನೀಡುವುದು,

ಶ್ರೀ ಎಂ ವೀರಯ್ಯ ಸ್ವಾಮಿ (ಚಿಂಚೋಳಿ).—ಮಾನ್ಯ ಅಧ್ಯಕ್ಷರೆ, ಚಿಂಚೋಳಿ ತಾಲ್ಲೂಕಿನಲ್ಲಿ ೭ ಪ್ರೌಢಶಾಲೆಗಳು ಮತ್ತು ೩ ಸಂಯುಕ್ತ ಕಿರಿಯ ಕಾಲೇಜುಗಳಿವೆ. ಇವುಗಳಲ್ಲಿ ೨ರಲ್ಲಿ ಕೇವಲಕಲೆ(ಆರ್ಟ್ಸ್) ವಿಷಯ ಮತ್ತು ಒಂದು ಕಿರಿಯ ಕಾಲೇಜಿನಲ್ಲಿ ಕಲೆ ಮತ್ತು ವಾಣಿಜ್ಯ ವಿಷಯಗಳನ್ನು ಭೋಧಿಸಲಾಗುತ್ತಿದೆ. ತಾಲ್ಲೂಕಿನ ವಿದ್ಯಾರ್ಥಿಗಳು ವಿಜ್ಞಾನ ವಿಷಯಗಳನ್ನು ಪಿ. ಯು. ಸಿ. ಮಟ್ಟದಲ್ಲಿ ತೆಗೆದು ಕೊಳ್ಳಬೇಕಾದರೆ ದೂರದ ಜಿಲ್ಲಾ ಕೇಂದ್ರಕ್ಕೆ (ಕಲ್ಬುರ್ಗಿ ೩೫ ಕಿ. ಮೀ) ಕುಳಂಹಿಸಬೇಕಾಗುತ್ತದೆ. ಇದರಿಂದಾಗಿ ಬಡ ವಿದ್ಯಾರ್ಥಿಗಳಿಗೆ ಹಾಗೂ ಉನ್ನತ ಶಿಕ್ಷಣ ಮಟ್ಟದಲ್ಲಿ ವಿಜ್ಞಾನ ಹಾಗೂ ತಾಂತ್ರಿಕ ವಿಷಯಗಳಲ್ಲಿ ವಿದ್ಯಾಭ್ಯಾಸ ಮಾಡಲ್ಜಿಸುವವರು ಸೌಲಭ್ಯದಿಂದ ವಂಚನೆಗೊಂಡಿದ್ದಾರೆ. ಕಳೆದ ೩ ವರ್ಷಗಳಿಂದ ನಾನು ಶಾಸಕನಾದ ಮೇಲೆ ಪ್ರತಿ ವರ್ಷ ಈ ಸದನದಲ್ಲಿ ನಮ್ಮ ತಾಲ್ಲೂಕಿನ ಕೇಂದ್ರ ಚಿಂಚೋಳಿಯಲ್ಲಿರುವ ಸರಕಾರ ಪದವಿಪೂರ್ವ ಕಾಲೇಜಿನಲ್ಲಿ ವಿಜ್ಞಾನ ಮತ್ತು ವಾಣಿಜ್ಯ ವಿಷಯಗಳನ್ನು ಪ್ರಾರಂಭಿಸಬೇಕೆಂದು ಒತ್ತಾಯಿಸುತ್ತಿದ್ದೇನೆ. ಹಾಗೂ ಈ ಬಗ್ಗೆ ಹಲವಾರು ಪತ್ರಗಳನ್ನು ಮಾನ್ಯ ಶಿಕ್ಷಣ ಸಚಿವರಿಗೆ ಬರೆದಿದ್ದೇನೆ. ಆದರೆ ಯಾವುದೇ ರೀತಿಯ ಕ್ರಮ ತೆಗೆದುಕೊಂಡಿಲ್ಲ. ಈ ಬಗ್ಗೆ ರಾಜಕೀಯ ಅಥವಾ ಯಾವುದೇ ತಾತ್ಸಾರ ತೋರದೆ ನನ್ನ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ವಿಜ್ಞಾನ ಮತ್ತು ವಾಣಿಜ್ಯ ವಿಷಯಗಳಲ್ಲಿ ಭೋದನೆ ಪಡೆಯಲು ೧೯೮೮–೮೯ ಶಿಕ್ಷಣ ವರ್ಷದಿಂದ ಅನುಕೂಲ ಮಾಡಿಕೊಡಬೇಕೆಂದು ಈ ಸದನದ ಮುಖಾಂತರ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

ಶ್ರೀ ಬಿ. ಸೋಮಶೇಖರ್.—ಮಾನ್ಯ ಅಧ್ಯಕ್ಷರೇ. ಶಿಕ್ಷಣ ಕ್ಷೇತ್ರದಲ್ಲಿ ವಿಜ್ಞಾನ ವಿಷಯದಲ್ಲಾಗಲೀ ಅಥವಾ ವಾಣಿಜ್ಯ ವಿಷಯದಲ್ಲಾಗಲೀ ಕಾಲೇಜುಗಳನ್ನು ಕೊಡತಕ್ಕಂತಹ ಕಾಲದಲ್ಲಿ ಯಾವುದೇ ರಾಜಕೀಯ ಉದ್ದೇಶದಿಂದ ನಾವು ಕೊಡುವುದಿಲ್ಲ. ಶೈಕ್ಷಣಿಕ ಆಧಾರದ ಮೇಲೆ ಕೊಡತಕ್ಕ ಪದ್ಧತಿಯನ್ನು ಸರ್ಕಾರ ಇಟ್ಟುಕೊಂಡಿದೆ. ಚಿಂಚೋಳಿ ತಾಲ್ಲೂಕಿನಲ್ಲಿ ವಿಜ್ಞಾನ ವಿಷಯಕ್ಕೆ ಸಂಬಂಧ ಪಟ್ಟ ಕಾಲೇಜಿನ ಅಗತ್ಯ ಇದೆ ಎಂಬುದು ಸರ್ಕಾರಕ್ಕೆ ಗೊತ್ತಿದೆ ಆದರೆ ನಮ್ಮ ಆರ್ಥಿಕ ಅಭಾವದಿಂದ ಕಳೆದ ಒಂದರಡು ವರ್ಷಗಳಿಂದ ಹೆಚ್ಚಿನ ಕಾಲೇಜುಗಳನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಈ ವರ್ಷ ಆದರ ಬಗ್ಗೆ ಪರಿಶೀಲನೆ ಮಾಡಿ ಈ ತಾಲೂಕಿನಲ್ಲಿ ಹೊಸದಾಗಿ ಕಾಲೇಜುಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

೧೭ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ ಹಾಗೂ ಕೃಷಿಯೇತರ ಭೂಮಿಯ ವರ್ಗೀಕರಣಕ್ಕೆ ಒತ್ತಾಯ

ಶ್ರೀಮತಿ ಮನೋರಮ ಮಧ್ವರಾಜ್ (ಉಡುಪಿ) —ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭೂಮಿಯನ್ನೂ ಕೃಷಿ ಭೂಮಿ ಎಂದು ವರ್ಗೀಕರಿಸಲಾಗಿದೆ. ಹಳ್ಳಿ ಇರಲಿ, ಪಟ್ಟಣವಿರಲಿ ಮಹಾನಗರ ಪಾಲಿಕೆ ಇರಲಿ, ಕಲ್ಲಿರಲಿ, ಕಾಡಿರಲಿ ಬೋಳು ಗುಡ್ಡವೇ ಇರಲಿ ಮನೆ ನಿವೇಶನವೇ ಇರಲಿ ಎಲ್ಲವೂ ಕೃಷಿ ಭೂಮಿಯೇ. ತತ್ಪರಿಣಾಮವಾಗಿ ಮನೆಕಟ್ಟಿಸಲು, ಚಿಕ್ಕ ಉದ್ದಿಮೆ ಸ್ಥಾಪಿಸಲು ಭೂಮಿಯ ಕನ್ವರ್ಷನ್ ಆಗಬೇಕು. ಇದಕ್ಕಾಗಿ ಆಫೀಸಿನಿಂದ ಆಫೀಸಿಗೆ ಅಲೆಯಬೇಕು. ತಿಂಗಳು